## ನಿಮ್ಮೊಡನೆ

# ಭಯೋತ್ಪಾದನೆ ವಿರುದ್ಧ ಅಳುಕಿಲ್ಲದ ಗಟ್ಟಿ ದನಿ ಶ್ರೀಸಾಮಾನ್ಯರದು ವಿವೇಕ-ಸಂಯಮದ ದಾರಿ

> ವಿಶ್ವಶಾಂತಿಗೆ ಭಾರತೀಯರೇ ಮಾದರಿ ಹಾಗೂ ಭಾರತದ ಶ್ರೀಸಾಮಾನ್ಯನ ವಿವೇಕ ಮತ್ತು ಸ್ಥೈರಣೆ ಅಸಾಧಾರಣ ಎನ್ನುವುದನ್ನು ಜಗತ್ತಿಗೆ ಮತ್ತೊಮ್ಮೆ ಸಾರುವ ಅವಕಾಶ ನಮಗೆ ಒದಗಿಬಂದಿದೆ. ದೇಶದೊಂದಿಗೆ ಮಾನವೀಯತೆಯೂ ಗೆಲ್ಲುವಂತೆ ನೋಡಿಕೊಳ್ಳುವ ಬಹು ದೊಡ್ಡ ಸವಾಲು ನಮ್ಮ ಮುಂದಿದೆ.



ಈಶ್ವರ್

ಪಹಲ್ಗಾಮ್‌ನಲ್ಲಿ ಉಗ್ರರಿಂದ ನಡೆದ ಭೀಕರ ಹತ್ಯಾಕಾಂಡ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ. 'ಆಪರೇಷನ್ ಸಿಂಧೂರ' ಹೆಸರಿನಲ್ಲಿ ಉಗ್ರರನ್ನು ಮಟ್ಟ ಹಾಕಲು ಭಾರತ ಸರ್ಕಾರ ದಿಟ್ಟ ಕ್ರಮ ಕೈಗೊಂಡಿದೆ. ಇತಿಹಾಸದುದ್ದಕ್ಕೂ ಯಾವುದೇ ರೂಪದ ಹಿಂಸೆಯನ್ನು ವಿರೋಧಿಸಿಕೊಂಡೇ ಬಂದಿರುವ ಭಾರತ, ಅನಿವಾರ್ಯ ಸಂದರ್ಭದಲ್ಲಿ ಕಾರ್ಯಾಚರಣೆ ಕೈಗೊಂಡಿದೆ. ಭಾರತದ ಸಂಕಲ್ಪಶಕ್ತಿ ಹಾಗೂ ಸೇನಾ ಸಾಮರ್ಥ್ಯವನ್ನು ಸಂಕೇತಿಸುವಂತಿರುವ ಈ ಕಾರ್ಯಾಚರಣೆ ಪಾಕಿಸ್ತಾನ ಪೋಷಿತ ಉಗ್ರರ ಮೇಲಿನ ದಾಳಿಯಷ್ಟೇ ಆಗಿರದೆ, ವಿಶ್ವಶಾಂತಿಯನ್ನು ನೆಲೆಗೊಳಿಸುವ ದೃಷ್ಟಿಯಿಂದಲೂ ಮಹತ್ವದ್ದಾಗಿದೆ.

'ಆಪರೇಷನ್ ಸಿಂಧೂರ' ಹೆಸರಿನಲ್ಲಿ ನಡೆದಿರುವ ಕಾರ್ಯಾಚರಣೆ ಉಗ್ರರ ನೆಲೆಗಳನ್ನಷ್ಟೇ ಗುರಿಯಾಗಿಸಿಕೊಂಡಿರುವುದು ಭಾರತದ ವಿವೇಕಕ್ಕೆ ನಿದರ್ಶನದಂತಿದೆ. ಆ ಕಾರಣದಿಂದಲೇ ಭಾರತದ ಹೋರಾಟಕ್ಕೆ ವಿಶ್ವದ ಬೆಂಬಲವೂ ದೊರೆತಿದೆ.

ಶಾಂತಿ ಭಂಗ ಹಾಗೂ ಶಾಂತಿ ರಕ್ಷಣೆಗಾಗಿ ನಡೆಯುತ್ತಿರುವ ಹೋರಾಟ ಸಹಜವಾಗಿಯೇ ಭಾರತೀಯರ ಭಾವೋದ್ವೇಗಕ್ಕೆ ಕಾರಣವಾಗಿದೆ. ಪ್ರಸಕ್ತ ಬಿಕ್ಕಟ್ಟು ಯಾವ ಹಂತವನ್ನು ಮುಟ್ಟುತ್ತದೆ ಹಾಗೂ ಯಾವಾಗ ಕೊನೆಗೊಳ್ಳುತ್ತದೆ ಎನ್ನುವುದನ್ನು ಅಂದಾಜು ಮಾಡುವುದು ಸದ್ಯಕ್ಕೆ ಸಾಧ್ಯವಿಲ್ಲ. ಸಂಘರ್ಷದ ಸ್ಥಿತಿ ತಾರಕಕ್ಕೆ ಮುಟ್ಟಲಾರದು ಎಂದು ಆಶಿಸುವುದು ವಿಶ್ವಶಾಂತಿಯನ್ನು ಬಯಸುವ ನಾಗರಿಕರಿಗೆ ಉಳಿದಿರುವ ದಾರಿ.

ದೇಶ ದೇಶಗಳ ನಡುವಣ ಸಂಘರ್ಷದಲ್ಲಿ ಸಾಮಾನ್ಯ ನಾಗರಿಕರಿಗೂ ಒಂದಷ್ಟು ಹೊಣೆಗಾರಿಕೆಗಳಿರುತ್ತವೆ. ದೇಶಕ್ಕಾಗಿ ಜೈಕಾರ ಕೂಗುವುದು ಹಾಗೂ ಎದುರಾಳಿಗಳ ಪತನಕ್ಕಾಗಿ ಪಟಾಕಿ ಹೊಡೆದು ಸಂಭ್ರಮಿಸುವುದು ಸಹಜ. ಹೋರಾಟದಲ್ಲಿ ದೊರೆಯುವ ಯಶಸ್ಸಿನೊಂದಿಗೆ ಸಂಭ್ರಮವೂ ಜೊತೆಯಾಗಿರುತ್ತದೆ. ಆದರೆ, ನಮ್ಮೆಲ್ಲ ಯೋಚನೆ ಹಾಗೂ ಆಚರಣೆಗಳಲ್ಲಿ ವಿವೇಕ ಹಾಗೂ ಸಂಯಮ ಅಗತ್ಯ. ಸುಳ್ಳು ಸುದ್ದಿಗಳನ್ನು ಹರಡದಿರುವುದು, ಮಾತುಕತೆಯಲ್ಲಿ ಸಂಯಮದ ಗೆರೆ ದಾಟದಿರುವುದು, ದೇಶದ ಸಾರ್ವಭೌಮತ್ವಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸುವುದು ಕೂಡ ನಮ್ಮ ದೇಶಪ್ರೇಮದ ಅಭಿವ್ಯಕ್ತಿಯೇ ಆಗಿದೆ.

ಹೋರಾಟವನ್ನು ಹೇಗೆ ನಡೆಸಬೇಕು ಎನ್ನುವುದನ್ನು ಸೇನೆ ನಿರ್ಧರಿಸುತ್ತದೆ. ಹೋರಾಟ ಯಾವಾಗ ಮಾಡಬೇಕು ಹಾಗೂ ಆ ಸಂಘರ್ಷ ಯಾವ ರೂಪದಲ್ಲಿರಬೇಕು ಎನ್ನುವುದನ್ನು ಸರ್ಕಾರ ತೀರ್ಮಾನಿಸುತ್ತದೆ. ಸೇನೆ ಮತ್ತು ಸರ್ಕಾರದೊಂದಿಗೆ ನಿಲ್ಲುವುದಷ್ಟೇ ನಾಗರಿಕರ ಜವಾಬ್ದಾರಿ. ಇದಕ್ಕೆ ಹೊರತಾಗಿ ಯುದ್ಧದ ಕುರಿತು ವದಂತಿಗಳನ್ನು ಹರಡುವುದು ಹಾಗೂ ಅತಿರಂಜಿತ ಸುಳ್ಳು ಸುದ್ದಿಗಳನ್ನು ಉತ್ಪಾದಿಸುವುದು 'ನಾಗರಿಕ ಜವಾಬ್ದಾರಿ'ಯ ಹೊಣೆಗೇಡಿತನದ ಪ್ರದರ್ಶನ ಎನ್ನಿಸಿಕೊಳ್ಳುತ್ತದೆ.

ಬಹುಮತಗಳ, ಭಿನ್ನಮತಗಳ ಕಾಲಘಟ್ಟವಿದು. ತಿಳಿದೋ ತಿಳಿಯದೆಯೋ ನಾವೆಲ್ಲರೂ ಸ್ವಯಂನಿರ್ಮಿತ ಗಾಜಿನಗೋಡೆಗಳನ್ನು ನಿರ್ಮಿಸಿಕೊಂಡಿದ್ದೇವೆ. ಕೈಯಲ್ಲಿ ಕಲ್ಲನ್ನೂ ಹಿಡಿದಿದ್ದೇವೆ. ಬಾಯಲ್ಲಿ ಬೆಂಕಿ ತುಂಬಿಕೊಂಡಿದ್ದೇವೆ. ಹೊರಗಿನ ಶಕ್ತಿಗಳೊಂದಿಗಿನ ಸಂಘರ್ಷದ ಸಮಯದಲ್ಲಿ ನಮ್ಮೊಳಗಿನ ಭಿನ್ನಮತಗಳೆಲ್ಲ ಮರೆಯಾಗಬೇಕು. ತಾತ್ವಿಕ ಭಿನ್ನಾಭಿಪ್ರಾಯಗಳನ್ನು ಮರೆತು ದೇಶದ ಸಾರ್ವಭೌಮತ್ವಕ್ಕಾಗಿ ಒಕ್ಕೊರಲ ದನಿ ಎತ್ತಬೇಕು. ಸಂಕಷ್ಟದ ಸಮಯದಲ್ಲಿ ಏಕವಾಗಿ ನಿಲ್ಲುವುದರಲ್ಲಿಯೇ ಭಾರತದ ಶಕ್ತಿಯಿದೆ. ದೇಶದ ಹಲವು ಸೊಲ್ಲುಗಳು, ಹಲವು ಭಾವ–ಬಣ್ಣಗಳು, ಸಂಸ್ಕೃತಿಗಳು – ಎಲ್ಲವೂ ಸಂಘರ್ಷ ಹಾಗೂ ಸಂಕಷ್ಟದ ಸನ್ನಿವೇಶದಲ್ಲಿ ಭಾರತೀಯತೆಯ ಪರಿಕಲ್ಪನೆಯಲ್ಲಿ ಒಗ್ಗೂಡುತ್ತವೆ. ಈ ಪರಂಪರೆ ಈಗಲೂ ಸಾಧ್ಯವಾಗಬೇಕು, ಆಗುತ್ತದೆ.

ದೇಶದೊಂದಿಗೆ ಮಾನವೀಯತೆಯೂ ಗೆಲ್ಲುವಂತೆ ನೋಡಿಕೊಳ್ಳುವ ಬಹು ದೊಡ್ಡ ಸವಾಲು ನಮ್ಮ ಮುಂದಿದೆ. ಭಾರತದ ಅಸ್ತಿತ್ವ ನಿಂತಿರುವುದೇ ಮಾನವೀಯ ಮೌಲ್ಯಗಳ ನೆಲೆಗಟ್ಟಿನಲ್ಲಿ. ಆ ಮೌಲ್ಯಸೌಧಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು ಎಲ್ಲರ ಹೊಣೆಗಾರಿಕೆ.

ಸಂಘರ್ಷದ ಸಮಯದಲ್ಲಿ ಎದುರಾಳಿಗಳ ಪತನ ಸಹಜವಾಗಿಯೇ ನಿರಾಳತೆಯನ್ನು ಉಂಟುಮಾಡುತ್ತದೆ. ಆದರೆ, ಸಂಘರ್ಷದ ಕಾರಣದಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಜನಸಾಮಾನ್ಯರು ತೊಂದರೆಗೊಳಗಾಗುವುದನ್ನು ನಾವು ಮರೆಯಬಾರದು. ಉಗ್ರರ ದಾಳಿಭೀತಿಯಿಂದ ನಲುಗುತ್ತಿರುವ ಪ್ರದೇಶಗಳ ಜನಸಾಮಾನ್ಯರ ಬಗ್ಗೆ ಯೋಚಿಸುವುದು ಸಾಧ್ಯವಾದರೆ, ಸಂಘರ್ಷದ ನೆಲದಿಂದ ದೂರವಿದ್ದು ಭಾವಾವೇಶದಿಂದ ಮಾತನಾಡುವ ನಮ್ಮ ಮಾತುಗಳ ಮಿತಿ ಸ್ಪಷ್ಟವಾಗುತ್ತದೆ. ಮಕ್ಕಳುಮರಿಗಳೊಂದಿಗೆ ಸುರಕ್ಷಿತ ಸ್ಥಳ ಹುಡುಕಿಕೊಂಡು ಅಲೆದಾಡುವ ಜನಸಾಮಾನ್ಯರ ಕಣ್ಣುಗಳಲ್ಲಿನ ದುಗುಡ ನಮ್ಮನ್ನು ಕಂಗೆಡಿಸದೆ ಹೋದರೆ ನಮ್ಮೊಳಗಿನ ಅಂತಃಕರಣ ಬರಿದಾಗಿದೆಯೆಂದೇ ಅರ್ಥ.

ಸದ್ಯದ ಸಂಘರ್ಷ ಭಯೋತ್ಪಾದಕರಿಗೆ ಹಾಗೂ ಉಗ್ರರನ್ನು ಸಲಹುತ್ತಿರುವ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸುವಲ್ಲಿ ಕೊನೆಗೊಳ್ಳುತ್ತದೆಂದು ಆಶಿಸೋಣ. ಈ ಸಂದರ್ಭ, ವಿಶ್ವಶಾಂತಿಗೆ ಭಾರತೀಯರೇ ಮಾದರಿ ಎನ್ನುವುದನ್ನು ಜಗತ್ತಿಗೆ ಮತ್ತೊಮ್ಮೆ ಸಾರಲು ನಮಗೆ ಒದಗಿಬಂದಿರುವ ಅವಕಾಶವೂ ಹೌದು. ಭಾರತದ ಶ್ರೀಸಾಮಾನ್ಯನ ವಿವೇಕ ಮತ್ತು ಸ್ಥೈರಣೆ ಅಸಾಧಾರಣ ಎನ್ನುವುದು ಮತ್ತೊಮ್ಮೆ ರುಜುವಾತಾಗಲಿ.

■ ರಘುನಾಥ ಚ.ಹ.